ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ಕೆ.ಐ.ಎ.ಡಿ.ಬಿ. ಹಂಚಿರುವ ನಿವೇಶನಗಳ ಬಗ್ಗೆ

ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು):-

973(1119) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ : 19-09-2014ರ ನಂತರ ಕೆ.ಐ.ಎ.ಡಿ.ಬಿ ಮಂಡಳಿಯು ಅಭಿವೃದ್ಧಿ ಪಡಿಸಿರುವ ಹಳೆಯ

ಕೈಗಾರಿಕಾ ಪ್ರದೇಶಗಳಲ್ಲಿ ಬಾಕಿ ಹಂಚಿಕೆಗಾಗಿ ದಿನಾಂಕ :30-04-2014ರಂದು ಇರುವಂತೆ ಎಷ್ಟು ಎಕರೆ ಜಮೀನು ಲಭ್ಯತೆ ಇದೆ; (ಕೈಗಾರಿಕಾ ಪ್ರದೇಶವಾರು ವಿವರವನ್ನು ನೀಡುವುದು)

(ಆ) ಈ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳಿಗೆ ದಿನಾಂಕ: 30.04.2014ರಂದು ಇದ್ದಂತೆ ಎಷ್ಟು ಎಕರೆ ಜಮೀನು ಮೀಸಲಿರಿಸಿದೆ ; (ಕೈಗಾರಿಕಾ ಪ್ರದೇಶವಾರು ವಿವರ ನೀಡುವುದು)

(ಇ) ಈ ಹಳೆಯ ಕೈಗಾರಿಕಾ ಪ್ರದೇಶಗಳಲ್ಲಿ ಸದರಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಹಂಚಿಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ; ಕ್ರಮ ಕೈಗೊಂಡಿದ್ದಲ್ಲಿ ಅವುಗಳ ಪ್ರತಿಗಳನ್ನು ಒದಗಿಸುವುದು ?